**ಸಿ.ಸಿ.ನಂ.: 599/2024**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **24-02-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು –ಆರೋಪಿ ಪರ ಶ್ರೀ. ಎಮ್.ಡಿ.ಆರ್. ವಕೀಲರಿಂದ**

1. ನನಗೆ ಹಣಕಾಸಿನ ವ್ಯವಹಾರದ ಕುರಿತಾಗಿ ನನಗೆ ಸಂಪೂರ್ಣ ಮಾಹಿತಿ ಇದೆ. ನಾನು ಬ್ಯಾಂಕಿನ ವ್ಯವಹಾರಕ್ಕೆ ಸಂಭಂಧಿಸಿದಂತೆ ಚೆಕ್‌ಗಳ ವ್ಯವಹಾರಗಳ ಕುರಿತಾಗಿ ನನಗೆ ಮಾಹಿತಿ ಇದೆ. ಸಾಮಾನ್ಯವಾಗಿ 20 ಸಾವಿರ ಹಾಗೂ ಅದಕ್ಕಿಂತ ಹೆಚ್ಚಿನ ಹಣವನ್ನು ಚೆಕ್ ಮೂಲಕ ವ್ಯವಹರಿಸುತ್ತಾರೆ ಎಂದರೆ ಸರಿಯಲ್ಲ. ಅಂಗಡಿಯ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ಪ್ರತಿದಿನ ಅಂದಾಜು 10 ಸಾವಿರ ದಷ್ಟು ವ್ಯವಹಾರವನ್ನು ಹೊಂದಿರುತ್ತೇನೆ. ಅಂಗಡಿ ವ್ಯವಹಾರವನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಮಾಲದಿಂದ ಆದಾಯ ಇಲ್ಲ ಎಂದರೆ ಸಾಕ್ಷಿಯು ನನಗೆ ಜಮೀನಿನಲ್ಲಿ ಆದಾಯ ಬರುತ್ತದೆ ಎಂದು ನುಡಿಯುತ್ತಾರೆ. ಈ ರೀತಿಯಾಗಿ ಅಂದಾಜು 14 ಗುಂಟೆ ಜಾಗ ಇದೆ. ಸದ್ರಿ ಜಾಗದಲ್ಲಿ ತೆಂಗಿನ ಗಿಡ ಹಾಗೂ ಅಡಿಕೆಯ ಜಾಗ ಇದೆ. 14 ಗುಂಟೆ ಕ್ಷೇತ್ರದಲ್ಲಿ ನನಗೆ ವರ್ಷಕ್ಕೆ 30 ಸಾವಿರ ಆದಾಯ ಇದೆ.

2. ನಾನು ನನ್ನ ಪ್ರತಿದಿನದ ವ್ಯವಹಾರದ ನಗದನ್ನು ನಾನು ಪ್ರತಿದಿನ ರೇವಣೆ ಇಟ್ಟು ಬ್ಯಾಂಕಿನ ಮುಖಾಂತರ ಅವಶ್ಯ ಮೊತ್ತವನ್ನು ಬ್ಯಾಂಕಿನಿಂದ ಸ್ವೀಕರಿಸುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನನ್ನ ಆದಾಯದಲ್ಲಿ ಎಲ್ಲ ಹಣವನ್ನು ಖಾತೆಗೆ ಹಾಕುವುದಿಲ್ಲ ಸ್ವಲ್ಪ ಹಣವನ್ನು ನನ್ನ ಬಳಿ ಇಟ್ಟುಕೊಂಡಿರುತ್ತೇವೆ ಎಂದು ಹೇಳುತ್ತಾರೆ. ನಾನು ಪ್ರತಿದಿನ 5 ರಿಂದ 6 ಸಾವಿರ ರೂಪಾಯಿಗಳಷ್ಟು ಹಣವನ್ನು ನನ್ನ ಬಳಿ ಇಟ್ಟುಕೊಳ್ಳುತ್ತೇವೆ.

3. ದಿನಾಂಕಃ 02/01/2024 ರಂದು ನಾನು ಬ್ಯಾಂಕಿನಿಂದ ಯಾವುದೇ ಹಣವನ್ನು ತೆಗೆದಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಬಳಿ ಆರೋಪಿತನಿಗೆ ನೀಡಿದ ಹಣವು ನಗದಾಗಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಬಳಿ ಆರೋಪಿತನಿಗೆ ನೀಡಿದ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಈ ಕುರಿತಾಗಿ ನಾನು ಮಾನ್ಯ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ಪುರಸಭೆಯಿಂದ ಪರವಾನಿಗೆಯನ್ನು ಹೊಂದಿರುತ್ತೇನೆ. ಕೃಷಿ ವ್ಯವಹಾರಕ್ಕೆ ಸಂಭಂಧಿಸಿದಂತೆ ಕೃಷಿ ಇಲಾಖೆಯಿಂದ ಪರವಾನಿಗೆ ಪಡೆಯಬೇಕು ಎಂದರೆ ಸಾಕ್ಷಿಯು ನನಗೆ ಈ ಕುರಿತಾಗಿ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿತ ಕೃಷಿ ವ್ಯವಹಾರ ಮಾಡುತ್ತಿದ್ದಾನೆ ಎಂದು ತೋರಿಸಲು ಆರೋಪಿತನ ಬಳಿ ಯಾವುದೇ ಅಧಿಕೃತ ದಾಖಲಾತಿ ಇಲ್ಲ ಎಂದರೆ ಸಾಕ್ಷಿಯು ನನಗೆ ಈ ಕುರಿತಾಗಿ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

**5.** ನಾನು ಆರೋಪಿತನಿಗೆ ಹಣವನ್ನು ನೀಡಬೇಕಾದರೆ ಆತನ ವ್ಯವಹಾರಕ್ಕೆ ಸಂಬಂಧಿಸಿದಂತೆ ವಿಚಾರಿಸಿದ್ದೀರಾ ಎಂದರೆ ಸಾಕ್ಷಿಯು ಆತನು ತೋಟಗಾರಿಕಾ ಉತ್ಪನ್ನಗಳನ್ನು ಖರೀದಿ ಹಾಗೂ ಮಾರಾಟ ಮಾಡುತ್ತಿರುವ ಕುರಿತಾಗಿ ನನಗೆ ತಿಳಿದಿದೆ ಆದರೆ ಆತನು ಈ ಕುರಿತಾಗಿ ಪರವಾನಿಗೆಯನ್ನು ಹೊಂದಿದ್ದಾನೋ ಇಲ್ಲವೋ ಎಂಬ ಬಗ್ಗೆ ನನಗೆ ತಿಳಿದಿಲ್ಲ. ಆರೋಪಿತರು ತೋಟಗಾರಿಕಾ ಉತ್ಪನ್ನಗಳನ್ನು ಖರೀದಿ ಮಾಡಿ ಅದನ್ನು ಮಾರಾಟ ಮಾಡುತ್ತಿರುವ ಬಗ್ಗೆ ನನ್ನ ಬಳಿ ಯಾವುದೇ ಸಾಕ್ಷಾಧಾರಗಳು ಇಲ್ಲ ಎಂದರೆ ಸರಿ.

**6.** ನಾನು ಯಾವುದೇ ಬಡ್ಡಿ ವ್ಯವಹಾರವನ್ನು ಮಾಡುವುದಿಲ್ಲ ನಾನು ಲಾಭಾಂಶವನ್ನು ಗಳಿಸುವಂತಹ ಯಾವುದೇ ವ್ಯವಹಾರವನ್ನು ಮಾಡುವುದಿಲ್ಲ. ನಾನು ನನ್ನ ಆದಾಯವನ್ನು ಮರೆಮಾಚಿ ಯಾವುದೇ ಆದಾಯ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ. ನನ್ನ ಮಕ್ಕಳು ಕುಮಟಾದ ನಿರ್ಮಲಾ ಕಾನ್ವೆಂಟಲ್ಲಿ ಶಾಲೆಗೆ ಹೋಗುತ್ತಾರೆ. ಅಲ್ಲಿ ನಾನು ಆದಾಯ ಪ್ರಮಾಣ ಪತ್ರವನ್ನು ನೀಡಿ ನನ್ನ ಮಕ್ಕಳಿಗೆ ಶಾಲೆಗೆ ಹಾಕಿರುತ್ತೇನೆ ಎಂದರೆ ಸರಿ.

7. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸ್ಧ್ರಿ ದಾಖಲಾತಿಯು ತನ್ನ ಮಕ್ಕಳನ್ನು **ಶಾಲೆಗೆ ಸೇರಿಸುವ ಸಂದರ್ಭದಲ್ಲಿ ನೀಡಿದ ಅರ್ಜಿ ಹಾಗೂ ಆದಾಯ ಪ್ರಮಾಣ ಪತ್ರ** ಎಂದು ಸಾಕ್ಷಿಯು ಒಪ್ಪಿಕೊಂಡಿದ್ದು, ಅದನ್ನು **ನಿಡಿ1** ಎಂದು ಗುರುತಿಸಲಾಯಿತು. ನಿಡಿ1 ರ ಎಲ್ಲಾ ಮಾಹಿತಿಗಳು ಸರಿ ಇದೆ.

8. ಪ್ರಾಥೇಶ ಮೋಹನ ನಂಬಿಯಾರ ಇವರನ್ನು ನನಗೆ ಆರೋಪಿತನು ಪರಿಚಯಸಿದ್ದು ಅವನು ನನಗೆ ಕಳೇದ ಎರಡು ವರ್ಷಗಳಿಂದ ಪರಿಚಯಸ್ಥ ನಾಗಿರುತ್ತಾನೆ. ಸುಧಾಕರ ವಿಠ್ಠಲ ಪಟಗಾರ ಇವರ ಪರಿಚಯ ಇರುವುದಿಲ್ಲ. ಸುಧಾಕರ ವಿಠ್ಠಲ ಪಟಗಾರ ಇವರನ್ನು ನಾನು ನೋಡಿರುವುದಿಲ್ಲ.

9. ನಿಪಿ 10 ನ್ನು ನ್ಯಾಯಾಲಯದ ಮುಂದೆ ಇರುವ ಅಂಗಡಿಯಲ್ಲಿ ಮಾಡಿಸಿರುತ್ತೇನೆ. ನಿಪಿ10 ರ ಬಾಂಡ ಪೇಪರನ್ನು ಆರೋಪಿತನು ಖರೀದಿಸಿದ್ದು, ಸ್ಧ್ರಿ ದಾಖಲಾತಿಯನ್ನು ಆರೋಪಿತನೇ ತಯಾರಿಸಿರುತ್ತಾನೆ. ಸ್ಧ್ರಿ ದಾಖಲಾತಿಯನ್ನು ತಯಾರಿಸಿಸಲು ನಾನು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಸ್ಧ್ರಿ ದಾಖಲಾತಿಯಲ್ಲಿರುವ ವಿಷಯದ ಕುರಿತಾಗಿ ನನಗೆ ವಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**10.** ಸದ್ರಿ ಕರಾರಿನಲ್ಲಿ ಆರೋಪಿತನು 2 ತಿಂಗಳಲ್ಲಿ ಹಣವನ್ನು ಹಿಂತಿರುಗಿಸಿಕೊಡುತ್ತೇನೆ ಎಂದು ನನ್ನಿಂದ ಪಡೆದುಕೊಂಡು ನಂತರದಲ್ಲಿ ವಾಪಸ್ಸ ನೀಡಿರುವುದಿಲ್ಲ. ಈ ವಿಷಯವನ್ನು ನನಗೆ ಆರೋಪಿತನು ತಿಳಿಸಿರುತ್ತಾನೆ. ಸಾಕ್ಷಿಯು ಮುಂದುವರಿದು ನಿಪಿ2 ನ್ನು ಆರೋಪಿತನು ನನಗೆ ನೀಡಿದ್ದು, ಆತನು ಹೇಳಿದ ನಂತರ ನಾನು ನಗದೀಕರಣಕ್ಕಾಗಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ10 ಗಣಕೀಕೃತಗೊಂಡ ನಂತರ ಅದೇ ದಿನ ಅದೇ ದಾಖಲಾತಿಗೆ ಸಂಬಂಧಿಸಿದಂತೆ ಬೇರೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿ.

11. ನಿಪಿ7 ನ್ನು ಆರೋಪಿತನಿಗೆ ನೀಡುವ ಸಂದರ್ಭದಲ್ಲಿ ಅದರ ಮಾಹಿತಿಯನ್ನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ 10 ಕ್ಕೆ ಸಂಬಂಧಪಟ್ಟ ವಿಷಯವನ್ನು ನಿಪಿ7 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಹಾಗೂ ಬರೆಯಲು ಬರುತ್ತದೆ. ಸಾಕ್ಷಿಯು ನಿಪಿ7 ನ್ನು ತಾನು ತನ್ನ ವಕೀಲರ ಮೂಲಕ ನೀಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ನಿಪಿ7 ರಲ್ಲಿ ನಿಪಿ 10 ನ್ನು ನ್ಯಾಯಾಲಯದ ಮುಂದುಗಡೆ ಮಾಡಿದ್ದೇವೆ ಹಾಗೂ ಆ ರೀತಿಯಾಗಿ ಕರಾರು ಪತ್ರ ಮಾಡಿಕೊಂಡಿದ್ದೇವೆ ಎಂಬ ಬಗ್ಗೆ ಒಕ್ಕಣೆ ಇಲ್ಲ ಎಂದರೆ ಸಾಕ್ಷಿಯು ನಿಪಿ 7 ರಲ್ಲಿ ನಿಪಿ10 ನ್ನು ಗಣಕೀಕೃತ ಗೊಳಿಸಿದ ಸ್ಥಳದ ಕುರಿತಾಗಿ ನಮೂದು ಇಲ್ಲ ಎಂದು ನುಡಿಯುತ್ತಾರೆ. ಈ ರೀತಿಯಾಗಿ ಯಾವುದೇ ಒಕ್ಕಣೆ ಇಲ್ಲದೇ ಇದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ7 ನ್ನು ನನ್ನ ವಕೀಲರ ಮುಖಾಂತರ ಪೋಸ್ಟ ಮಾಡಿರುತ್ತೇನೆ. ನಿಪಿ7 ದಿನಾಂಕಃ 13/03/2024 ರಂದು ಪೋಸ್ಟ ಆಗಿರುತ್ತದೆ. ನಾವು ದಿನಾಂಕಃ 13/03/2024 ರಂದು ನಿಪಿ 7 ನ್ನು ಅಂಚೆ ಮುಖಾಂತರ ರವಾನೆ ಮಾಡಿದ್ದರೆ ಅದೇ ದಿನಾಂಕದ ಅಂಚೆ ರಶೀದಿಯನ್ನು ನೀಡುತ್ತಾರೆ ಎಂದರೆ ಸರಿ. ಸಾಕ್ಷಿಯು

ಮುಂದುವರಿದು ಅದು ವಕೀಲರ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ದಿನಾಂಕಃ 13/03/2024 ರಂದು ನಿಪಿ7 ನ್ನು ರವಾನೆ ಮಾಡಿದ ಕುರಿತಾಗಿ ಅಂಚೆ ರಶೀದಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ7 ನ್ನು ದಿನಾಂಕಃ 13/03/2024 ರಂದು ನೀಡಲಿಲ್ಲ ಎಂದರೆ ಸರಿಯಲ್ಲ. ನಿಪಿ8 ದಿನಾಂಕಃ 14/03/2024 ಕೆಕ ಸಂಬಂಧಿಸಿದ್ದಾಗಿದ್ದು ಬೇರೆ ಒಂದು ಪ್ರಕರಣದ ದಾಖಲಾತಿಯನ್ನು ಈ ಪ್ರಕರಣಕ್ಕೆ ಸೇರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಧಾನ ಪ್ರಭಾರ ಪ್ರ.ದ.ನ್ಯಾ.ದಂ. ಕುಮಟಾ